**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ಇವರು ನಿಯಮ 72 ರ ಮೇರೆಗೆ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನಾ ಪತ್ರಕ್ಕೆ ಉತ್ತರ**

**ಸೂಚನೆ:**

ಸರ್ಕಾರದ ವಿವಿಧ ಇಲಾಖೆಗಳ ವತಿಯಿಂದ ನೀಡಲಾದ ಜಾಹೀರಾತುಗಳಿಗಾಗಿ ಮೀಸಲಾದ ಹಣದ ಬಳಕೆ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯಮುಖ್ಯಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ :**

- ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಜನಸಾಮಾನ್ಯರ ಕಲ್ಯಾಣಕ್ಕಾಗಿ ಜಾರಿಗೆ ತರುವ ಯೋಜನೆಗಳು/ಕಾರ್ಯಕ್ರಮಗಳು ಸಾರ್ವಜನಿಕರಿಗೆ ತಲುಪಿ, ಅದರ ಸದುಪಯೋಗವನ್ನು ಜನಸಾಮಾನ್ಯರು ಪಡೆದುಕೊಂಡಲ್ಲಿ ಮಾತ್ರ ಸರ್ಕಾರದ ಯೋಜನೆಗಳು /ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ. ರಾಜ್ಯದ ಕಟ್ಟಕಡೆಯ ಜನರಿಗೂ ಇಂತಹ ಸರ್ಕಾರದ ಯೋಜನೆಗಳನ್ನು /ಕಾರ್ಯಕ್ರಮಗಳನ್ನು ತಲುಪಿಸುವ ಸಲುವಾಗಿ ಐ.ಇ.ಸಿ.( ಮಾಹಿತಿ, ಶಿಕ್ಷಣ ಹಾಗೂ ಸಂವಹನ) ಮಾಹಿತಿಯುಳ್ಳ ಆಕರ್ಷಕ ಜಾಹೀರಾತುಗಳನ್ನು ಪ್ರಸ್ತುತ ಜಾರಿಯಲ್ಲಿರುವ ಜಾಹೀರಾತು ಅನುಷ್ಠಾನ ನಿಯಮಗಳನ್ವಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮುಖಾಂತರವೇ ಬಿಡುಗಡೆ ಮಾಡಬೇಕಾಗಿರುತ್ತದೆ.
- ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳ/ಕಾರ್ಯಕ್ರಮಗಳ ಕುರಿತು ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಬಿಡುಗಡೆಯಾಗುವ ಜಾಹೀರಾತು ವೆಚ್ಚವನ್ನು ಸಂದರ್ಭಕ್ಕನುಸಾರ ಆಯಾ ಇಲಾಖೆಗಳಿಗೆ ಒದಗಿಸಲಾಗುವ ಅನುದಾನದಿಂದ ಭರಿಸಲಾಗುತ್ತದೆ.
- ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಪ್ರತಿ ಆಯವ್ಯಯದಲ್ಲಿ ಐ.ಇ.ಸಿ.(ಮಾಹಿತಿ, ಶಿಕ್ಷಣ ಹಾಗೂ ಸಂವಹನ) ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಒದಗಿಸುವ ಅನುದಾನದಿಂದ ರಾಜ್ಯದ ಮುಖ್ಯಮಂತ್ರಿಗಳು ನೆರವೇರಿಸುವ ಉದ್ಘಾಟನೆ/ಶಂಕುಸ್ಥಾಪನೆ ಕಾರ್ಯಕ್ರಮಗಳು ಸೇರಿದಂತೆ ರಾಷ್ಟ್ರೀಯ ಮತ್ತು ರಾಜ್ಯ ಹಬ್ಬಗಳು, ಮಹನೀಯರ ಜಯಂತಿ, ಸರ್ಕಾರದ ವಾರ್ಷಿಕೋತ್ಸವ ಹಾಗೂ ಸರ್ಕಾರವು ರೂಪಿಸುವ ನೂತನ ಯೋಜನೆಗಳ ಕುರಿತ ಜಾಹೀರಾತುಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಬಿಡುಗಡೆ ಮಾಡಲಾಗುತ್ತಿದ್ದು, 2024-25 ನೇ ಸಾಲಿನ ಆಯವ್ಯಯದಲ್ಲಿ ಐ.ಇ.ಸಿ. ಲೆಕ್ಕಶೀರ್ಷಿಕೆಯಡಿ ರೂ.9487.50 ಲಕ್ಷಗಳನ್ನು ಒದಗಿಸಲಾಗಿದೆ. ಸರ್ಕಾರದ ವಿವಿಧ ಇಲಾಖೆಗಳ ವತಿಯಿಂದ ನೀಡಲಾದ ಜಾಹೀರಾತುಗಳಿಗಾಗಿ ಪ್ರತ್ಯೇಕವಾಗಿ ಹಣವನ್ನು ಮೀಸಲಿರಿಸಿರುವುದಿಲ್ಲ.

**ಕಡತ ಸಂ:ಕೆಸಿಐ-ಪಿಐಪಿ/369/2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ